ಪರಹಿತಮ್ ಫೌಂಡೇಷನ್‌ನ ಸಮಾಚಾರ ಪತ್ರಿಕೆ

# ವಿಹಿತಮ್


ಸಂಪುಟ ೧ ನವೆಂಬರ್– ಡಿಸೆಂಬರ್ ೨೦೨೨ ಸಂಚಿಕೆ

## ಕನ್ನಡ ಡಿಂಡಿಮ

ಕನ್ನಡ ಭಾಷೆಯ ವೈಶಿಷ್ಟ್ಯ ಹಾಗೂ ಗರಿಮೆಯನ್ನು ಪಸರಿಸಲು 'ಕನ್ನಡ ಡಿಂಡಿಮ' ಎಂಬ ವಿಶೇಷ ಅಭಿಯಾನವೊಂದನ್ನು ಪರಹಿತಮ್ ಫೌಂಡೇಷನ್ ವತಿಯಿಂದ ಕೈಗೊಳ್ಳಲಾಯಿತು. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ನಿತ್ಯ ಬಳಕೆಯಲ್ಲಿರುವ ಆಂಗ್ಲ ಪದಗಳಿಗೆ ಪರ್ಯಾಯ ಕನ್ನಡ ಪದಗಳನ್ನು ಪರಿಚಯಿಸಿ ಅರ್ಥವನ್ನು ತಿಳಿಸಲಾಯಿತು.

ಈ ಅಭಿಯಾನವನ್ನು ನವೆಂಬರ್ ತಿಂಗಳು ಪೂರ್ತಿ ಮಾಡಿದೆವು. ಪ್ರತಿನಿತ್ಯ ತಪ್ಪದೇ ಒಂದು ಹೊಸ ಪದದ ಪರಿಚಯ ಮಾಡಲಾಯಿತು. ನಮ್ಮ ಈ ಕಾರ್ಯಕ್ಕೆ ಅನೇಕರಿಂದ ಉತ್ತಮ ಪ್ರತಿಕ್ರಿಯೆಯು ದೊರೆಯಿತು.

ಪರಹಿತಮ್ ಫೌಂಡೇಷನ್ ಫೇಸ್ಬುಕ್ ಹಾಗೂ ಇನ್ಸ್ಟಾಗ್ರಾಂ ಖಾತೆಯಲ್ಲಿ ಈಗಲೂ ಆ ಪದಗಳನ್ನು ನೋಡಬಹುದು.




PARAHITAM FOUNDATION®

## ಕಲಿ – ನಲಿ

ವಾರಾಂತ್ಯಗಳಲ್ಲಿ ಆಶ್ರಯ ಕೇಂದ್ರವೊಂದರ ಮಕ್ಕಳಿಗೆ ಬೆಳಕು, ಅಶ್ರಕ, ಕಾಮನಬಿಲ್ಲು ಮುಂತಾದ ವಿಜ್ಞಾನ ವಿಷಯಗಳನ್ನು ಸರಳ ಪ್ರಯೋಗಗಳ ಮೂಲಕ ಹೇಳಿಕೊಡಲಾಯಿತು. ಕನ್ನಡ ಕಾಗುಣಿತವನ್ನು ಅಭ್ಯಾಸ ಮಾಡಿಸಲಾಯಿತು.



ಇದರ ಜೊತೆಗೆ, ಅಲ್ಲಿನ ಮಕ್ಕಳಿಗೆ ವಾರದ ಮಧ್ಯೆಯೂ ತರಗತಿಗಳನ್ನು ನಡೆಸಲಾಗುತ್ತಿದೆ. ಎಸ್.ಡಿ.ಎಮ್ ಆಯುರ್ವೇದ ಕಾಲೇಜಿನ ನಮ್ಮ ಕಾರ್ಯಕರ್ತರು ಇಂಗ್ಲಿಷ್, ವಿಜ್ಞಾನ ಮತ್ತು ಗಣಿತ ತರಗತಿಗಳನ್ನು ನಡೆಸುತ್ತಿದ್ದಾರೆ.



## ಪ್ಲಾಸ್ಟಿಕ್ ಮುಕ್ತ ಪರಿಸರದತ್ತ ನಮ್ಮ ನಡೆ

ಪ್ಲಾಸ್ಟಿಕ್ ಚೀಲಗಳನ್ನು ಬಳಸುವುದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹಾಗಾಗಿ ಪ್ಲಾಸ್ಟಿಕ್ ಬಳಕೆಯನ್ನು ನಾವು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಈ ಉದ್ದೇಶದಿಂದ ನಾವು ಕಾಗದಿಂದ ಚೀಲವನ್ನು ತಯಾರಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡೆವು. ಮನೆಯಲ್ಲಿದ್ದ ಹಳೇ ಸುದ್ದಿಪತ್ರಿಕೆಗಳನ್ನು ನಾವು ಸಂಗ್ರಹಿಸಿ ಅದರಿಂದ ಚೀಲವನ್ನು ತಯಾರಿಸಿದೆವು. ನಂತರ ಆ ಚೀಲಗಳನ್ನು ವ್ಯಾಪರಿಗಳಿಗೆ ಉಚಿತವಾಗಿ ನೀಡಲು ತೀರ್ಮಾನಿಸಿದೆವು.

ಬಸವನಗುಡಿಯ ದೊಡ್ಡ ಗಣೇಶ ದೇವಸ್ಥಾನದ ಬಳಿ ನಡೆದ ವಾರ್ಷಿಕ ಕಡಲೆಕಾಯಿ ಪರಿಷೆಯಲ್ಲಿನ ವ್ಯಾಪಾರಿಗಳಿಗೆ ಆ ಚೀಲಗಳನ್ನು ನೀಡಿದೆವು. ಹೀಗೆ ಮಾಡುವ ಮೂಲಕ ಪ್ಲಾಸ್ಟಿಕ್ ಬಳಕೆಯನ್ನು ತಡೆಯಲು ಹಾಗೂ ಪರಿಸರವನ್ನು ಉಳಿಸಲು ನಮ್ಮ ಕರ್ತವ್ಯವನ್ನು ನಿಭಾಯಿಸಿದೆವು.





PARAHITAM FOUNDATION®

# ಹಂಚಿ ಬಾಳಿದರೆ ಪರಮಸುಖ

ಮದುವೆ, ಗೃಹಪ್ರವೇಶ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಅನೇಕ ಬಾರಿ ಆಹಾರ ಮತ್ತು ತಿನಿಸುಗಳು ಉಳಿದು ಪೋಲಾಗುವುದನ್ನು ನಾವು ಗಮನಿಸಿರುತ್ತೇವೆ. ಅದು ಸುಮ್ಮನೇ ಹಾಳಾಗುವ ಬದಲಾಗಿ ಹಸಿದವರ ಹೊಟ್ಟೆ ತುಂಬಲು ಕಾರಣವಾಗಲಿ ಎಂಬುದು ನಮ್ಮ ಆಶಯ.





ಹೀಗಾಗಿ, ಈ ರೀತಿ ಕಾರ್ಯಕ್ರಮಗಳಲ್ಲಿ ಉಳಿದಂಥ ಆಹಾರವನ್ನು ಅಗತ್ಯವಿರುವ ಜನರಿಗೆ ತಲುಪಿಸುವ ಕೆಲಸವನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಹಿತಮ್ ಫೌಂಡೇಷನ್ ಮಾಡಿದೆ.

ಅಲ್ಲದೆ, 11 ಸ್ವಯಂಸೇವಕರ ಜನ್ಮದಿನವನ್ನು ವೃದ್ಧಾಶ್ರಮ ಮತ್ತು ಅನಾಥಾಶ್ರಮಗಳಿಗೆ ಆಹಾರ ವಿತರಿಸುವ ಮೂಲಕ ಆಚರಿಸಲಾಯಿತು.

# ಒಂದೊಂದು ಹನಿ ರಕ್ತವೂ ಅತ್ಯಮೂಲ್ಯ

ರಕ್ತ ದಾನವನ್ನು ಮಾಡುವವರ ಅಗತ್ಯ ಇದೆ ಎಂದು ನಮ್ಮನ್ನು ಅನೇಕರು ಸಂಪರ್ಕಿಸಿದ್ದರು. ಆ ಸಂದರ್ಭಗಳಲ್ಲಿ ‘ರಕ್ತ ದಾನಿ’ಗಳನ್ನು ಹೊಂದಿಸುವ ಕೆಲಸವನ್ನು ಪರಹಿತಮ್ ಫೌಂಡೇಷನ್ ವತಿಯಿಂದ ಮಾಡಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವಿಷಯವನ್ನು ಹಂಚುವ ಮೂಲಕ ಈ ಕೆಲಸವನ್ನು ಸಾಧಿಸಲಾಯಿತು. ರಕ್ತದ ಅವಶ್ಯಕತೆ ಇರುವವರಿಗೆ ದಾನಿಗಳನ್ನು ಹುಡುಕಿಕೊಡುವಲ್ಲಿ ಪರಹಿತಮ್ ಫೌಂಡೇಷನ್ ಒಂದು ಕೊಂಡಿಯಾಗಿದೆ.




ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ವಿವಿಧ ಆಸ್ಪತ್ರೆಯಲ್ಲಿನ 5 ರೋಗಿಗಳಿಗೆ ದಾನಿಗಳನ್ನು ಹುಡುಕಿಕೊಡುವ ಮೂಲಕ ಸಹಾಯ ಮಾಡಲಾಗಿದೆ.

# ಮೊಳೆ ಹೊಡೆಯಬೇಡಿ, ಮರವ ನೋಯಿಸಬೇಡಿ

ಮರಗಳಿಗೆ ಹೊಡೆದ ಮೊಳೆಗಳನ್ನು ತೆಗೆಯುವ ಕಾರ್ಯಕ್ರಮವನ್ನು ನಮ್ಮ ತಂಡದ ವತಿಯಿಂದ ನಡೆಸಲಾಯಿತು. ನಮ್ಮ ತಂಡದ ಸ್ವಯಂಸೇವಕರು ಮಾತ್ರವಲ್ಲದೇ ಸಾರ್ವಜನಿಕರು ಕೂಡ ಇದರಲ್ಲಿ ಭಾಗಿಯಾದರು. ಪುಟ್ಟ ಮಕ್ಕಳಿಂದ ಹಿರಿಯರವರೆಗೆ ಎಲ್ಲರೂ ಈ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಅಲ್ಲದೆ, ನಮ್ಮ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುವ ಮೂಲಕ ಪ್ರೋತ್ಸಾಹಿಸಿದರು. ಈ ಕಾರ್ಯಕ್ರಮದಲ್ಲಿ ಅನೇಕರು 'ನಾವು ಎಂದಿಗೂ ಮೊಳೆಗಳನ್ನು ಮರಗಳಿಗೆ ಚುಚ್ಚುವುದಿಲ್ಲ ಮತ್ತು ಬೇರೆಯವರಿಗೆ ಹಾಗೆ ಮಾಡಲು ಬಿಡುವುದಿಲ್ಲ' ಎಂದು ಪ್ರತಿಜ್ಞೆ ಮಾಡಿದರು. ನಮ್ಮ ಕಾರ್ಯಕ್ರಮಕ್ಕೆ ಕೈಜೋಡಿಸಿದ ಸಾರ್ವಜನಿಕರಿಗೆ ನಮ್ಮ ತಂಡದ ವತಿಯಿಂದ ವಿಶೇಷ ಉಡುಗೊರೆಯನ್ನು ನೀಡಿದೆವು.




### ಪ್ರೇರಣಾತ್ಮಕ ಘಟನೆ :

ನಮ್ಮ ತಂಡದ ಕಾರ್ಯಕರ್ತರ ಸ್ನೇಹಿತರೊಬ್ಬರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. "ನನ್ನ ಮನೆಯ ಹೊರಗೆ ಒಂದು ಮರವಿದೆ. ಅದು ನನಗೆ ಸ್ನೇಹಿತನಂತೆ. ನನ್ನ ಬಾಲ್ಯವನ್ನು ಆ ಮರದ ನೆರಳಿನಲ್ಲಿ ಕಳೆದಿದ್ದೆ. ಆ ಮರವನ್ನು ನಿತ್ಯ ನೋಡುತ್ತಿದ್ದರೂ ಅದಕ್ಕೆ ಹೊಡೆದ ಮೊಳೆ ಅಥವಾ ಪಿನ್‌ಗಳನ್ನು ನಾನು ಗಮನಿಸಿರಲಿಲ್ಲ. ನಿಮ್ಮ ಚಟುವಟಿಕೆ ನೋಡಿದ ಬಳಿಕ ಆ ಮರವನ್ನು ನೋಡಿದೆ. ಆಗ ಆ ಮರಕ್ಕೂ ಅನೇಕ ಮೊಳೆ ಹಾಗೂ ಪಿನ್‌ಗಳನ್ನು ಹೊಡೆದಿರುವುದು ಕಂಡಿತು. ಮರಕ್ಕೆ ಹಾನಿ ಉಂಟುಮಾಡುವಂಥ ಎಲ್ಲಾ ವಸ್ತುಗಳನ್ನು ನಾನು ತೆಗೆದು ಮರವನ್ನು ಮೊಳೆಗಳಿಂದ ಮುಕ್ತಗೊಳಿಸಿದ್ದೇನೆ" ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

PARAHITAM FOUNDATION®

# ಮಕ್ಕಳ ದಿನಾಚರಣೆ

ನವೆಂಬರ್ ತಿಂಗಳಿನಲ್ಲಿ ಬರುವ ವಿಶೇಷ ದಿನವೆಂದರೆ ನವೆಂಬರ್ 14. ಮಕ್ಕಳಿಗಾಗಿಯೇ ಮೀಸಲಿಟ್ಟ ದಿನ, ಮಕ್ಕಳ ದಿನಾಚರಣೆ. ಈ ದಿನವನ್ನು ನಾವು ಮಕ್ಕಳೊಂದಿಗೆ ಕಳೆಯುವ ಮೂಲಕ ಸಾರ್ಥಕಗೊಳಿಸಿದೆವು.





ಮಕ್ಕಳಿಗೆ ಆಟ ಹಾಗೂ ಪಾಠ ಎರಡೂ ಮುಖ್ಯ. ಈ ಉದ್ದೇಶದಿಂದ ಮಕ್ಕಳ ದಿನಾಚರಣೆಯಂದು ಸತ್ಯ ಸಾಯಿ ಆಶ್ರಮದ ಮಕ್ಕಳಿಗೆ ಕನ್ನಡ ಭಾಷೆಯ ಕುರಿತು ಪಾಠವನ್ನು ಮಾಡಿದೆವು. ಅಲ್ಲದೆ, ನಮ್ಮ ಸ್ವಯಂಸೇವಕರೊಬ್ಬರು ತಯಾರಿಸಿದ ಸಿಹಿ ತಿನಿಸುಗಳನ್ನು ಮಕ್ಕಳಿಗೆ ವಿತರಿಸಿದೆವು. ಮಕ್ಕಳ ಮುಖದಲ್ಲಿ ನಗು ಮೂಡಿಸುವ ಮೂಲಕ ಮಕ್ಕಳ ದಿನಾಚರಣೆಯನ್ನು ಆಚರಿಸಿದೆವು.

# ನಮ್ಮ ಕೆಲಸವನ್ನು ಗುರುತಿಸಿದ ಕ್ಷಣ

ಪತ್ರಕರ್ತರಾಗಿರುವ ಶ್ರೀ ಸುಧಾಕರ ಜೈನ್ ಅವರು ತಮ್ಮ ಮನೆಯ ಹತ್ತಿರವಿರುವ ಸರ್ಕಾರೀ ಶಾಲೆಯ ಮಕ್ಕಳಿಗೆ ಯಕ್ಷಗಾನ, ನಾಟಕ ಹಾಗೂ ಮುಂತಾದ ಪಠ್ಯೇತರ ಚಟುವಟಿಕೆಗಳನ್ನು ಆಯೋಜಿಸುತ್ತಿದ್ದಾರೆ.

ಅವರೊಂದಿಗೆ ಕೈಜೋಡಿಸಿ ಆ ಮಕ್ಕಳಿಗೆ ಇಂಗ್ಲಿಷ್ ಹೇಳಿಕೊಡುವ ಕಾರ್ಯವನ್ನು ಪರಹಿತಮ್ ವತಿಯಿಂದ ಆರಂಭಿಸಲಾಯಿತು.

24/12/2022 ರಂದು ಶ್ರೀ ಸುಧಾಕರ್ ಜೈನ್ ಮತ್ತು ಸಮಷ್ಟಿ ತಂಡದ ವತಿಯಿಂದ ಸರ್ಕಾರೀ ಶಾಲೆಯ ಮಕ್ಕಳ ಒಳಿತಿಗಾಗಿ, ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕವನ್ನು ಆಯೋಜನೆ ಮಾಡಲಾಯಿತು. ಈ ವೇಳೆ ಮಕ್ಕಳಿಗೆ ಇಂಗ್ಲಿಷ್ ಹೇಳಿಕೊಡುವ ನಮ್ಮ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಪರಹಿತಮ್ ಫೌಂಡೇಶನ್ ಸಂಸ್ಥೆಯನ್ನು ಸನ್ಮಾನಿಸಲಾಯಿತು.

ಶ್ರೀ ಸುಧಾಕರ ಜೈನ್ ಮತ್ತು ಅವರ ತಂಡದವರಿಗೆ ನಮ್ಮ ಧನ್ಯವಾದ.

# ನಮ್ಮನ್ನು ರಕ್ಷಿಸಿ





## ಒಂದೊಳ್ಳೆ ಮಾತು

ವೃಕ್ಷವು ಹಣ್ಣುಗಳನ್ನು
ಬಿಟ್ಟು ಸಮೃದ್ಧವಾಗಿದ್ದರೂ
ಒಂದು ಹಣ್ಣನ್ನೂ ತಾನು
ಅಪೇಕ್ಷಿಸುವುದಿಲ್ಲ.
ಎಲ್ಲವೂ ಪರರ ತೃಪ್ತಿಗಾಗಿಯೇ.
ಜೀವನದ ಧನ್ಯತೆ
ಇರುವುದು ಪರೋಪಕಾರದಲ್ಲಿ.

PARAHITAM FOUNDATION®

# ಜನದನಿ

## ಶಿಕ್ಷಣ ಯಾರ ಹೊಣೆಗಾರಿಕೆ?

ಈ ಪ್ರಶ್ನೆಯೊಂದು ನನ್ನ ಕಿವಿಗೆ ಬಿದ್ದ ತಕ್ಷಣ ನನ್ನ ಸುತ್ತ ಒಂದು ಕಟಕಟೆ ನಿರ್ಮಾಣ ಆಗಿ ಹೋಯ್ತು. ಪಾಠ ಮಾಡಿದ ಗುರುಗಳೆಲ್ಲಾ ಅಲ್ಲೇ ಸುತ್ತ ನಿಂತಂತ್ತಿತ್ತು. ಅವರ ಸುತ್ತಲೂ ಒಂದೊಂದು ಸುತ್ತಿನ ಕಟಕಟೆ ಕಂಡ ಹಾಗಾಯ್ತು. ಆ ಸುತ್ತಿನ ಸುತ್ತ ಇನ್ನೊಂದಷ್ಟು ಸುತ್ತುಗಳು ಕಂಡ ಹಾಗಾಯ್ತು. ಆ ಸುತ್ತಿನಲ್ಲಿ ಒಂದಷ್ಟು ಗೊತ್ತಿರುವ ಮುಖಗಳು. ಒಂದಷ್ಟು ಗೊತ್ತಾಗಬೇಕಾದ ಮುಖಗಳು. ಅವರೆಲ್ಲರ ಸುತ್ತಲೂ ಮತ್ತೆ ಒಂದೊಂದು ಕಟಕಟೆ ಕಾಣುತ್ತಿತ್ತು.

ಎಲ್ಲಾ ಬಾಲ್ಯದಿಂದ ನೋಡಿದ ಸಂಬಂಧಗಳು. ಹೆಚ್ಚು ಅಂಕ ಪಡೆಯುತ್ತಿದ್ದ ಪಕ್ಕದ ಮನೆಯ ಸಹಪಾಠಿಯನ್ನು ಹೊಗಳಿ ಹೊಗಳಿ ತನ್ನ ಮಗುವಿಗೆ ಅವಮಾನ ಮಾಡಿ ಕುಗ್ಗಿಸುತ್ತಿದ್ದ ತಂದೆ–ತಾಯಿ. ಓದಲು ಬರದೆ ಇದ್ದಾಗ ತಪ್ಪು ತಪ್ಪಾಗಿ ಓದುವುದನ್ನೇ ಎಲ್ಲರಿಗೂ ಕೇಳುವಂತೆ ಓದಿಸಿ ತಾನೂ ನಗಾಡಿ, ತರಗತಿಯ ಇತರ ಮಕ್ಕಳೂ ನಗುವಂತೆ ಮಾಡುತ್ತಿದ್ದ ಲಘುವಾಗಿದ್ದ ಆ ಗುರುಗಳು.
ಶಾಲೆಯ ಪಕ್ಕದ ಗೂಡಂಗಡಿಯಲ್ಲಿ ಒಂದು ಚಕ್ಕುಲಿಯ ದುಡ್ಡು ಕೊಟ್ಟು, ಎರಡು ಚಕ್ಕುಲಿಯನ್ನು ಕದ್ದು ಸಿಕ್ಕಿಬಿದ್ದ ಮೇಲೆ ಪ್ರತಿದಿನ ಚಕ್ಕುಲಿ ಕಳ್ಳ ಎಂದು ಎಲ್ಲರಿಗೂ ಆಗ ಪರಿಚಯಿಸುತ್ತಿದ್ದ, ಈಗ ಸತ್ತಿರಬಹುದಾದ ಗೂಡಂಗಡಿಯೊಳಗಿನ ಮುದಿ ಮುನುಷ್ಯ.

ಟಿಕೇಟಿನ ದುಡ್ಡು ಉಳಿಸಿ ಐಸ್ ಕ್ಯಾಂಡಿ ತಿನ್ನುವಾಸೆಯಿಂದ ಟಿಕೇಟ್ ಮಾಡದೆ ತಪ್ಪಿಸಿಕೊಂಡಾಗ, ಸಿಕ್ಕಿಬಿದ್ದ ಕೂಡಲೇ ಎಲ್ಲರಿಗೂ ಕೇಳುವ ಹಾಗೆ ಬೈದು, ಎಲ್ಲರಿಗೂ ಕಾಣುವ ಹಾಗೆ ಹೊಡೆದು, ಅರ್ಧದಾರಿಯಲ್ಲಿ ಬಸ್ಸಿನಿಂದ ಇಳಿಸಿ ಹೋಗಿದ್ದ ಆ ಕಂಡೆಕ್ಟರ್. ಹೀಗೆ ಇನ್ನೂ ಸುಮಾರಷ್ಟು ಸಂಬಂಧಗಳು ಆ ಕಟಕಟೆಯೊಳಗೆ ನಿಂತಂತೆ ಕಂಡವು.

'ತಾಯಿಯೇ ಮೊದಲ ಗುರು' ಅಂತ ಒಂದು ಮಾತು. ಈ ವಾಕ್ಯವನ್ನು ಒಂದು ಗೆರೆಯಿಂದ ಇನ್ನೊಂದು ಗೆರೆಗೆ ವಿಸ್ತರಿಸಿದರೆ, ಮೊದಲ ಗುರುವನ್ನು ದಾಟಿ ಎರಡನೇ ಗುರುವೊಬ್ಬರು ಇದ್ದಾರೆ ಅಂತಾಯ್ತು. ಆ ಎರಡನೆಯ ಗುರು ಹೇಗಿರುತ್ತಾರೆ ಅನ್ನುವುದರ ಮೇಲೆ ಶಿಕ್ಷಣದ ದಾರಿಯ ಮೇಲಿನ ಕಲ್ಲು ಮುಳ್ಳುಗಳ ಲೆಕ್ಕ ಸಿಗುತ್ತಾ ಹೋಗುತ್ತದೆ.

ತಾಯಿ ಮೊದಲ ಗುರುವಾಗುತ್ತಾಳೆ ಸರಿ. ಆದರೆ ನಂತರದ ಗುರುವಾಗುವವರು ತಾಯಿಯಾಗುತ್ತಾರಾ? ಒಂದು ವೇಳೆ ತಾಯಿಯಾದರು ಅಂತಾದರೆ, ವಿದ್ಯಾರ್ಥಿ ತಾನು ಗುರುವಿನ ಮಡಿಲ ಮಗುವಾಗುತ್ತದೆ. ಗುರು ತಾಯಿಯಾಗದೆ ಹೋದರೆ ವಿದ್ಯಾರ್ಥಿ ಅಪರಾಧಿಯಾಗುತ್ತಾ ಹೋಗುವಂತಾಗುತ್ತದೆ. ಮಗುವೊಂದು ಅಪರಾಧ ಮಾಡುವವರೆಗೆ ಮರೆಯಲ್ಲಿ ಕಾದು ಅಪರಾಧ ಮಾಡಿದ ಮೇಲೆ ಅಪರಾಧಿಯನ್ನು ಸಾಕುವ ಬದಲು ಅಪರಾಧ ಮಾಡದಂತೆ ರಕ್ಷಿಸುವುದು ತಾಯಿಯ ಹೃದಯ.

PARAHITAM FOUNDATION®

ಗುರುವಾದವರು ತಾಯಿಯಾದರೆ ಸಾಕೆ? ತನ್ನ ಸುತ್ತ ಇರುವವರೆಲ್ಲರೂ ತಾಯಿಯಾಗುತ್ತಾ ಹೋಗಬೇಕಲ್ಲಾ. ಆಗ ತನ್ನ ಸುತ್ತಲಿನ ಮಕ್ಕಳೆಲ್ಲಾ ಮಕ್ಕಳಾಗುತ್ತಾರೆ. ಮುಂದೊಂದು ದಿನ ದೇಶದ ಸಂಪತ್ತಾಗುತ್ತಾರೆ.

ಶಿಕ್ಷಣ ಅನ್ನುವುದು ನಾಲ್ಕು ಗೋಡೆ, ಮೂರು ಕಿಟಕಿ, ಒಂದು ಬಾಗಿಲು ಇರುವ ಶಾಲೆಯೊಳಗೆ ಸಿಗುವಂತಹ ಬೋಧನೆ ಮಾತ್ರ ಅಲ್ಲವಲ್ಲಾ. ಮಗುವಿನ ಸುತ್ತ ಇರುವ ಪ್ರಪಂಚವೇ ಒಂದು ಗುರುಕುಲವಾದಾಗ ಆ ಮಗುವಿನ ಸುತ್ತ ಇರುವ ನಾವೆಲ್ಲರೂ ಒಂದಲ್ಲ ಒಂದು ರೀತಿಯ ಗುರುಗಳಾಗಬೇಕು. ಆ ಗುರುಗಳೆಲ್ಲರೂ ತಾಯಿಯಾಗಬೇಕು.

ಇಷ್ಟನ್ನು ಬರೆದು ಮುಗಿಸುವಾಗ ನನ್ನ ಹೆಗಲ ಮೇಲಿನ ಭಾರದ ತೂಕ ಇನ್ನೂ ಒಂದಷ್ಟು ಹೆಚ್ಚಾದಂತಿದೆ.

ಈಗ ಇಷ್ಟನ್ನು ಓದಿ ಮುಗಿಸುವಾಗ ನಿಮ್ಮ ಹೆಗಲ ಭಾರದ ತೂಕವನ್ನು ಅಳತೆ ಮಾಡುವ ತಕ್ಕಡಿ ಅಲ್ಲೆಲ್ಲೋ ನಿಮ್ಮ ಹೃದಯದ ಒಳಗಿನಿಂದ ಇಣುಕುತ್ತಿರುತ್ತದೆ ನೋಡಿ.

ಶಿಕ್ಷಣ ನಮ್ಮ ಹೊಣೆಯೂ ಹೌದು.



–ಸುಧಾಕರ ಜೈನ್
ಹೊಸಬೆಟ್ಟು ಗುತ್ತು

PARAHITAM FOUNDATION®

# ಜನದನಿ

## ಮಂಗಲ ಪಾಂಡೆ

ಸ್ವಾತಂತ್ರ್ಯ ಹೋರಾಟದ ಮೊದಲ ಸಂಗ್ರಾಮವೆಂದ ಕೂಡಲೇ ಮೊದಲಿಗೆ ನೆನಪಾಗುವುದು ಅಪ್ರತಿಮ ದೇಶಭಕ್ತ (ಯೋಧ) ಮಂಗಲಪಾಂಡೆ. ಮಂಗಲಪಾಂಡೆ ಒಬ್ಬ ಭಾರತೀಯ ಸೈನಿಕ. 1857ರ ಭಾರತೀಯ ದಂಗೆಯ ಪ್ರಾರಂಭದ ಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಇವರು 1857 ಎಪ್ರಿಲ್ 8 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮ ಎಂದೇ ಪ್ರಖ್ಯಾತರು. ಈಸ್ಟ್ ಇಂಡಿಯಾ ಕಂಪನಿಯ ಬ್ರಿಟಿಷ್ ಸೈನ್ಯದಲ್ಲಿ ಸಿಪಾಯಿಯಾಗಿದ್ದವರು. ಭಾರತದಲ್ಲಿ, ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹೋರಾಡುವ ಸ್ವಾತಂತ್ರ್ಯ ಹೋರಾಟಗಾರ ಎಂದು ಪಾಂಡೆಯವರನ್ನು ನೆನಪಿಸಿಕೊಳ್ಳಲಾಗುತ್ತದೆ.

ಮಂಗಲಪಾಂಡೆ ಒಂದು ಭೂಮಿಹಾರ್ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು. ಅವರು 22ನೇ ವಯಸ್ಸಿನಲ್ಲಿ 1849 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯನ್ನು ಸೇರಿದ್ದರು. ಪಾಂಡೆ, 34ನೇ ಬಂಗಾಳ ಸ್ಥಳೀಯ ಪದಾತಿದಳದ 6ನೇ ಕಂಪನಿಯ ಭಾಗವಾಗಿದ್ದರು.

ಅವರ ಹೆಸರು ಇತಿಹಾಸದಲ್ಲಿ ಅಜರಾಮರವಾಗುವುದಕ್ಕೆ ಸಂದರ್ಭ ಸೃಷ್ಟಿಯಾಗಿದ್ದು, 1857 ಮಾರ್ಚ್‌ನಲ್ಲಿ. ಆ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರ ಹೊಸದಾಗಿ ಪರಿಚಯಿಸಿದ್ದ ಎನ್ಫೀಲ್ಡ್ ಪಿ–53 ರೈಫಲ್‌ಗಳ ಬುಲೆಟ್ ಕಾರ್ಟ್ರಿಜ್‌ಗಳಿಗೆ ಹಸು ಮತ್ತು ಹಂದಿಯ ಮಾಂಸವನ್ನು ಸವರಲಾಗಿತ್ತು. ಅದನ್ನು ಉಪಯೋಗಿಸಲು ಕಾಟ್ರಿಜ್‌ನ ಹಿಂಭಾಗವನ್ನು ಕಚ್ಚಬೇಕಿತ್ತು. ಈ ವಿಷಯ ತಿಳಿಯುತ್ತಿದ್ದಂತೆಯೇ ಸೇನೆಯಲ್ಲಿದ್ದ ಹಿಂದು ಮತ್ತು ಮುಸ್ಲಿಂ ಸೈನಿಕರು ಉದ್ರಿಕ್ತರಾಗಿದ್ದರು. ಏಕೆಂದರೆ ಹಸು ಹಿಂದುಗಳಿಗೆ ಪೂಜನೀಯ. ಹಂದಿ ಎಂದರೆ ಮುಸ್ಲಿಮರಿಗೆ ವರ್ಜ್ಯ. ಎರಡು ಮತಗಳ ಧಾರ್ಮಿಕ ಭಾವನೆಗೆ ನೋವುಂಟು ಮಾಡುವ ಇಂಥ ಕೆಲಸ ಸಾಧ್ಯವಿಲ್ಲ ಎಂದು ಸಿಪಾಯಿಗಳು ವಿರೋಧಿಸಿದ್ದರು.

ಬ್ರಿಟಿಷರ ಬಿಗುಮುಷ್ಟಿಯಿಂದ ಸ್ವಾತಂತ್ರ್ಯ ಪಡೆವ ಹುಮ್ಮಸ್ಸಿನಲ್ಲಿದ್ದ ಬಿಸಿ ರಕ್ತಕ್ಕೆ ನೆಪವೊಂದು ಬೇಕಿತ್ತು. 1857, ಮಾರ್ಚ್ 29ರಂದು ಬ್ರಿಟಿಷ್ ಅಧಿಕಾರಿ ಮೇಜರ್ ಹ್ಯೂಸನ್ ಮತ್ತು ಲೆಫ್ಟಿನಂಟ್ ಭಾಫ್ ಮೇಲೆ ಮಂಗಲ್ ಪಾಂಡೆ ಗುಂಡಿನ ದಾಳಿ ನಡೆಸಿ ಅವರಿಬ್ಬರನ್ನೂ ನೆಲಕ್ಕುರುಳಿಸಿದ್ದರು. ನಂತರ ಬ್ರಿಟಿಷ್ ಸೇನೆಯು ಮಂಗಲ್ ಪಾಂಡೆಯವರನ್ನು ಬಂಧಿಸಿದ್ದರು. ಅಲ್ಲದೇ, 1857ರ ಹೊತ್ತಿಗೆ ಬ್ರಿಟಿಷರು ಈಸ್ಟ್ ಇಂಡಿಯಾ ಕಂಪನಿಯ ಹೆಸರಿನಲ್ಲಿ ಭಾರತವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿದ್ದರು. ಮೇ 10, 1857ರಲ್ಲಿ ಮೀರತ್‌ನ ಕಂಟೋನ್ಮೆಂಟ್ ಭಾಗದಲ್ಲಿ ಭಾರತೀಯ ಸಿಪಾಯಿಗಳಿಗೂ ಮತ್ತು ಬ್ರಿಟಿಷ್ ಸಿಪಾಯಿಗಳಿಗೂ ವ್ಯಾಜ್ಯವಾಗಿ, ಇದೇ ಸಂಗತಿ 'ಸಿಪಾಯಿ ದಂಗೆ' ಅಥವಾ 'ಭಾರತೀಯ ದಂಗೆ'ಗೆ ನಾಂದಿಯಾಯಿತು.

PARAHITAM FOUNDATION®

ಈ ಸಂದರ್ಭದಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವುದಕ್ಕೆ ಹೊರಟ ಪಾಂಡೆ ಅವರ ಪ್ರಯತ್ನವೂ ವಿಫಲವಾಗಿತ್ತು. ಗಾಯಗೊಂಡಿದ್ದ ಪಾಂಡೆಯವರನ್ನು ಬ್ರಿಟಿಷ್ ಸರ್ಕಾರದ ಆದೇಶದ ಮೇರೆಗೆ ಏಪ್ರಿಲ್ 8 (1857)ರಂದು ಬ್ಯಾರಕ್ಪುರ(ಕೋಲ್ಕತ್ತ)ದಲ್ಲಿ ಗಲ್ಲಿಗೇರಿಸಲಾಯಿತು.

ಭಾರತ ಸರ್ಕಾರವು ಅವರನ್ನು ಸ್ಮರಿಸುವುದಕ್ಕಾಗಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತು. ಅವರ ಜೀವನ ಮತ್ತು ಕ್ರಿಯೆಗಳನ್ನು ಹಲವಾರು ಸಿನಿಮಾ ನಿರ್ಮಾಣಗಳಲ್ಲಿ ಚಿತ್ರಿಸಲಾಗಿದೆ.

ಹಾಗೇ ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಗೋಸಂತತಿಯನ್ನು ಉಳಿಸಲು ಪಣತೊಟ್ಟಿರುವ ಶ್ರೀರಾಮಚಂದ್ರಾಪುರ ಮಠವು "ಮಂಗಲ ಪಾಂಡೆ"ಯ ನೆನಪಿನಲ್ಲಿ 11 ನವೆಂಬರ್  2016 ರಿಂದ 29 ಜನವರಿ 2017 ರವರೆಗೆ 'ಮಂಗಲಗೋಯಾತ್ರೆ' ಎಂಬ ಕಾರ್ಯಕ್ರಮವನ್ನು ರಾಜ್ಯದುದ್ದಗಲಕ್ಕೂ ಸಂಚಾರ ಮಾಡುವ ಮೂಲಕ ಗೋಮಾತೆಯ ರಕ್ಷಣೆಗಾಗಿ ಹೋರಾಟ ನಡೆಸಿದರು.



–ಅಕ್ಷತಾ ಹೆಬ್ಬಾರ್

PARAHITAM FOUNDATION®

ಕನ್ನಡ ವಿಹಿತಮ್ ತಂಡ:

ವಿನ್ಯಾಸ: ದರ್ಶನ ಹೆಗಡೆ

ಸಂಪಾದಕರು:

1. ಗಣೇಶ ಹೆಗಡೆ
2. ವೈಷ್ಣವೀ ಕುಲಕರ್ಣಿ

ನೆರವು:

ಪ್ರಾರ್ಥನಾ

ಪ್ರಮೋದ ಹೆಗಡೆ

PARAHITAM FOUNDATION®

## Contact Us

8088064074

parahitam_foundation

parahitam.foundation@gmail.com

www.parahitam.org

PARAHITAM
FOUNDATION®